**<u>ಸಾಕ್ಷಿಯನ್ನು ದಿಃ 08.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎಂ.ಆರ್.ಹೆಚ್ ವಕೀಲರಿಂದಃ-</u>**

ದಾವಾ ಸ್ವತ್ತಗಳನ್ನು ನಾನು ನೋಡಿರುತ್ತೇನೆ. ಅಲ್ಲದೆ ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನು ನನ್ನು ನಾನು ನೋಡಿರುತ್ತೇನೆ. ಸದರಿ ದಾವಾ ಸ್ವತ್ತುಗಳನ್ನು ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನು ನನ್ನು ಸುಮಾರು 10-15 ವರ್ಷಗಳಿಂದಲೂ ನೋಡಿರುತ್ತೇನೆ. ಸದರಿ ಸ್ವತ್ತುಗಳು ಮೊದಲು ಹೇಗಿದ್ದವು ಎಂದು ನನಗೆ ಗೊತ್ತಿತ್ತು. 1982 ರಲ್ಲಿ ಮೇಲೆ ಹೇಳಿದ ಆಸ್ತಿಗಳೆಲ್ಲರೂ ಬರಡು ಭೂಮಿಗಳು ಎಂದರೆ ಸರಿಯಲ್ಲ. ನನ್ನ ಪ್ರಕಾರ 1982 ಈಗ ಹೇಗಿತ್ತು ಹಾಗೆ ದಾವ ಜಮೀನು ಇದ್ದವು. ದಾವಾ ಜಮೀನು ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನಿನಲ್ಲಿ ಪ್ರಸ್ತುತ ಬಾಳೆ, ತೆಂಗು ಮತ್ತು ಅಡಿಕೆ ಬೆಳೆ ಇರುತ್ತದೆ. ಸದರಿ ತೆಂಗಿನ ಮರ ಮತ್ತು ಅಡಿಕೆ ಮರಗಳು 20-25 ವರ್ಷದ ಮರಗಳು.

ನನ್ನ ಮದುವೆ 1982 ರಲ್ಲಿ ಆಗಿರುತ್ತದೆ. ನನ್ನ ವಯಸ್ಸು ಈಗ 73 ವರ್ಷ ಆಗಿರುತ್ತದೆ. ದಾವಾ ಆಸ್ತಿ ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನು ನನ್ನು ಮೂಲತಃ 4 ನೇ ಪ್ರತಿವಾದಿ ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯೂ 1982 ರಲ್ಲಿ ನನ್ನ ಮದುವೆಗಿಂತ 3 ತಿಂಗಳು ಮೊದಲೆ ಮದುವೆ ಆಗಿದ್ದರು. ಅವರ ಆರೋಗ್ಯ ಸ್ಥಿತಿ ಚೆನ್ನಾಗಿದೆ. 7 ನೇ ಪ್ರತಿವಾದಿ ಅರ್ಜುನ್ ಕೋ ಬ್ರದರ್ ನ ಮಗ ಇರುತ್ತಾನೆ. ಅವರು ಹುಣಸೂರು ಪಟ್ಟಣದಲ್ಲಿಯೆ ದಿನಸಿ ಅಂಗಡಿ ಇಟ್ಟುಕೊಂಡು ವ್ಯವಹಾರ ಮಾಡುತ್ತಾರೆ. ಹಾಗೆ ದಿನಸಿ ಅಂಗಡಿ ಪ್ರಾರಂಭಿಸಿದಾಗ ಅವರು ವಯಸ್ಸು 45 ವರ್ಷ ಇತ್ತು. ಅವರು ಅಂಗಡಿ ನಡೆಸಲು ಬಂಡವಾಳ ಹಾಕಿ ಅಂಗಡಿಗೆ ಮುಗಂಡವಾಗಿ ಹಣ ಕೊಟ್ಟಿದ್ದು 4 ನೇ ಪ್ರತಿವಾದಿ ಎಂದರೆ ಸರಿಯಲ್ಲ. ಅವರು 2015-16 ರಲ್ಲಿ ಮದುವೆ ಆಗಿರಬಹುದು. ಅವರ ಮದುವೆ ಖರ್ಚಿಗೆಂದು 5 ಲಕ್ಷ ರೂ. ಗಳನ್ನು 4 ನೇ ಪ್ರತಿವಾದಿಯೆ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ 5, 7 ನೇ ಪ್ರತಿವಾದಿಗಳ

ಮದುವೆಯನ್ನು ದಾವಾ ಸ್ವತ್ತುಗಳು ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನಿನಿಂದ ಬಂದ ಆದಾಯದಿಂದ ಮಾಡಿರುತ್ತಾರೆ ಎಂದರೆ ಸರಿಯಲ್ಲ.

1982 ರಿಂದ ದಾವಾ ಸ್ವತ್ತುಗಳು ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನಿನಿಂದ ಬಂದ ಅದಾಯವನ್ನು 4 ನೇ ಪ್ರತಿವಾದಿ ತಾಯಿ ಸುವರ್ಣಮ್ಮ ತೆಗೆದುಕೊಳ್ಳುತ್ತಿದ್ದರು. ಸದರಿ ಆದಾಯವನ್ನು ಏನು ಮಾಡುತ್ತಿದ್ದರು ಎಂದರೆ ಅವರ ಸ್ವತ್ತದ್ದು ಅದ ಕಾರಣ 2017 ರ ವರೆಗೆ ಅವರನ್ನು ವಿಚಾರಿಸಿರುವುದಿಲ್ಲ ಎನ್ನುತ್ತಾರೆ. ಸದರಿ ದಾವಾ ಸ್ವತ್ತು ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನು 4 ನೇ ಪ್ರತಿವಾದಿ ತಾಯಿ ಸುವರ್ಣಮ್ಮ ರವರು ನೋಡಿಕೊಂಡು ಅಭಿವೃದ್ಧಿ ಪಡಿಸಿದ ಬಗ್ಗೆ ದಾಖಲೆ ಇರುವುದಿಲ್ಲ. 2017 ರ ವರೆಗೂ 4 ನೇ ಪ್ರತಿವಾದಿ ತಾಯಿ ಸುವರ್ಣಮ್ಮ ರವರೆ ದಾವಾ ಜಮೀನನ್ನು ಅಭಿವೃದ್ಧಿ ಪಡಿಸಿಕೊಂಡು ಆದಾಯವನ್ನು ಅವರೆ ತೆಗೆದುಕೊಳ್ಳುತ್ತಿದ್ದರೂ ಎಂದು ದಾವಾ ಹಾಕುವ ಸಮಯದಲ್ಲಿ ವಾದಿ ವಕೀಲರಿಗೆ ತೀಳಿಸಿದ್ದರೆ ಎಂದರೆ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ.

2017 ನಂತರ ದಾವಾ ಸ್ವತ್ತು ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನು ನಲ್ಲಿ ಬಂದಂತಹ ಆದಾಯವನ್ನು ಯಾರು ಉಪಯೋಗಿಸುತ್ತಿದ್ದರು ಎಂದರೆ ಸಾಕ್ಷಿ 4 ನೇ ಪ್ರತಿವಾದಿ ಸದರಿ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿ ದರೋಡೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ದಾವೆ ಹಾಕುವ ಕಾಲಕ್ಕೆ ಹೇಳಿರುತ್ತೇವೆ. ವಾದಿಗೆ ಪ್ರತಿವಾದಿಗಳ ಮೇಲೆ ದಾವೆ ಹೂಡಲು ವ್ಯಯಕ್ತಿಕವಾಗಿ ಮನಸ್ಸಿಲ್ಲವೆಂದರೆ ಸರಿಯಲ್ಲ, ಆದ್ದರಿಂದಲೇ ಅವರು ನ್ಯಾಯಾಲಯಕ್ಕೆ ನೇರವಾಗಿ ಬಂದು ಸಾಕ್ಷಿ ನುಡಿಯುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಸೆಪ್ಟೆಂಬರ್ 2024 ರ ವರೆಗೆ ಅವರೆ ನ್ಯಾಯಾಲಯಕ್ಕೆ ಬರುತ್ತಿದ್ದರು ಎನ್ನುತ್ತಾರೆ. ವಾದಿ ವೈಯಕ್ತಿಕ ಕೇಸ್ ನಡೆಸಲು ಇಷ್ಟ ಇಲ್ಲದಿದ್ದರೂ ನಾನೆ ಜಿ.ಪಿ.ಎ ಅನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಆರೋಗ್ಯ ಸರಿ ಇಲ್ಲ ಎಂದು ದಾಖಲೆ ಹಾಜರು ಪಡಿಸಿಲ್ಲ, ಅವರು ಆರೋಗ್ಯವಾಗಿ ಮನೆಯಲ್ಲೆ ಇದ್ದಾರೆ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಸಾಧ್ಯವಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸುವರ್ಣಮ್ಮ ಎಂಬುವವರು ತಿರಿಕೊಂಡ ಎಷ್ಟು ವರ್ಷ ಮೊದಲು ದಾನ ಪತ್ರ ತಯಾರಿಗಿದ್ದು ಎಂದರೆ ಸಾಕ್ಷಿ ಸುವರ್ಣಮ್ಮ ರವರು 2023 ರಲ್ಲಿ ತೀರಿಕೊಂಡಿದ್ದು, ಸದರಿ ದಾಖಲೆ 2017 ರಲ್ಲಿ ರಿಜಿಸ್ಟರ್ ಆಗಿದ್ದು ಎನ್ನುತ್ತಾರೆ. ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನಗೆ ಸಂಬಂಧಿಸಿದಂತೆ ಸುವರ್ಣಮ್ಮ ರವರಿಗೆ ದಾನ ಪತ್ರ ಬರೆಯಲು ಇಷ್ಟ ಇರಲಿಲ್ಲ, ಅದನ್ನು ಪಡೆಯಲು ವಾದಿಗೂ ಇಷ್ಟ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾನ ಪತ್ರ ಆದದ್ದು ದಿಃ 06.07.2017 ರಂದು. ಸದರಿ ದಾನ ಪತ್ರ ನನ್ನ ಕುತಂತ್ರದ ಮೇರೆಗೆ ತಯಾರಾದದ್ದು ಎಂದರೆ ಸರಿಯಲ್ಲ. ಸದರಿ 4 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನ್ನ ಹೆಂಡತಿ ವಾದಿಗೆ ಈ ಕೇಸ್ ನಡೆಸಲು ಆಸೆ ಇಲ್ಲದಿದ್ದರೂ ನನ್ನ ವೈಯಕ್ತಿಕ ಕೇಸು ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮತ್ತು ಸರ್ವೆ ನಂ. 48/13 ರಲ್ಲಿ 4 ಎಕರೆ ಜಮೀನುಗಳಿಂದ ಬಂದ ಆದಾಯದಿಂದ 4 ನೇ ಪ್ರತಿವಾದಿ 5 ಮತ್ತು 7 ನೇ ಪ್ರತಿವಾದಿಗಳ ಮದುವೆ ಮಾಡಿದ್ದು, 7 ನೇ ಪ್ರತಿವಾದಿಗೆ ಅಂಗಡಿ ಮಾಡಲು ಹಣಕಾಸಿನ ವ್ಯವಸ್ಥೆಯನ್ನು ಒದಗಿಸಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.